# ಹೆಜ್ಜೆ ಗುರುತು

ಮೈಸೂರಿನ ಪ್ರಾಕೃತಿಕ ಹಿನ್ನೆಲೆ, ಚಾಮುಂಡಿಬೆಟ್ಟ ಕೋಟೆಯ ಸುತ್ತಲಿನ ವಾತಾವರಣ ಎಲ್ಲವನ್ನೂ ಅಧ್ಯಯನ ಮಾಡಿದ ಇರ್ವಿನ್ ಹೊಸ ಅರಮನೆಯ ನೀಲಿನಕಾಶೆ ಸಿದ್ಧಪಡಿಸಿ ಮಹಾರಾಣಿಯವರ ಮುಂದಿಟ್ಟರು. ಅದೇ 1897ರ ಅಕ್ಟೋಬರ್‌ನಲ್ಲಿ ಬೆಂಕಿಯಿಂದ ಹಾಳಾಗಿದ್ದ ಹಳೆಯ ಅರಮನೆಯ ಬುನಾದಿಯ ಮೇಲೆ ಹೊಸ ಅರಮನೆ ಕಟ್ಟಲು ಗುದ್ದಲಿ ಪೂಜೆಯೂ ನೆರವೇರಿತು.

ಹೊಸ ಅರಮನೆಯ ನಿರ್ಮಾಣ ಕಾರ್ಯ ಎಂಜಿನಿಯರ್ ಬಿ.ಪಿ. ರಾಘವಲು ನಾಯ್ಡು ನೇತೃತ್ವದಲ್ಲಿ 1899ರಲ್ಲಿ ಶುರುವಾಗಿ 1912ರಲ್ಲಿ ಪೂರ್ಣಗೊಂಡಿತು. ಈ ಅವಧಿಯಲ್ಲಿ ಜಗನ್ಮೋಹನ ಅರಮನೆ ಒಡೆಯರ್ ಪರಿವಾರದ ತಾತ್ಕಾಲಿಕ ನಿವಾಸವಾಗಿತ್ತು.

ನಿರ್ಮಾಣ ಹಂತದಲ್ಲೇ ಮೈಸೂರು ಅರಮನೆ ರಾಷ್ಟ್ರೀಯ ಅಂತರರಾಷ್ಟ್ರೀಯ ಮಾಧ್ಯಮಗಳ ಗಮನಸೆಳೆಯಿತು. ಇಂಡೊ ಸಾಸ್ಕೆನಿಕ್ ಶೈಲಿಯಲ್ಲಿ ಕಟ್ಟಲಾಗಿರುವ ಅರಮನೆ ಕಟ್ಟಡ ಆರು ಸುಂದರ ಗೊಮ್ಮಟಗಳನ್ನು ಒಳಗೊಂಡಿದೆ. ಹೊರಭಾಗ ಮೊಘಲ್ ಶೈಲಿಯಲ್ಲಿದ್ದರೆ, ಒಳಭಾಗದಲ್ಲಿ ಬೇಲೂರು, ಹಳೇಬೀಡು ವಿನ್ಯಾಸಗಳೊಂದಿಗೆ ಹೊಯ್ಸಳ ಶೈಲಿ ಹಾಗೂ ವಿವಿಧ ಶೈಲಿಗಳು ಏಕೀಭವಿಸಿವೆ. ಮರ, ದಂತ, ಸುಣ್ಣ, ಗಾರೆ, ವನ್ಯಜನ್ಯ ಬಣ್ಣಗಳು ಕೂಡಿಕೊಂಡು ಮನಮುದಗೊಳಿಸುವಂತಿತ್ತು ಹೊಸ ಅರಮನೆ.

ಅರಮನೆ ಕಟ್ಟಡದ ವಿಸ್ತೀರ್ಣ 245 ಅಡಿ ಉದ್ದ ಹಾಗೂ 156 ಅಡಿ ಅಗಲ. ಮೂರು ಅಂತಸ್ತುಗಳಿರುವ ಈ ಕಟ್ಟಡದ ಮಧ್ಯದಲ್ಲಿ ಐದು ಅಂತಸ್ತುಗಳ ಗೋಪುರವಿದೆ. ಇದರಲ್ಲಿ ದೊಡ್ಡ ಗೋಪುರ ನೆಲದಿಂದ 145 ಅಡಿ ಅಗಲ. ಅರಮನೆಯನ್ನೇ ಶಿಖರ ಪ್ರಾಯವಾಗಿಸಿರುವ ಅದ್ಭುತ ಶಿಲ್ಪ ಇದು.

ಬೆಂಗಳೂರನ್ನು ಹಸಿರುಮಯಗೊಳಿಸಿ ಲಾಲ್‌ಬಾಗ್ ಕೆಂಪು ತೋಟವನ್ನು ಬಹುಮುಖವಾಗಿ ಬೆಳೆಸಿದ ಕಟ್ಟಡ ಕಲಾನಿಪುಣ ಜಿ.ಎಚ್. ಕ್ರಂಬಿಗಲ್ ಅವರೆ ಹಿಂದಿನ ರಾಜಧಾನಿ ಮೈಸೂರಿನ ಹಲವು ಅರಮನೆ ಕಟ್ಟಡಗಳಿಗೆ ಹೊಸ ಬಗೆ ಬೆಡಗು ಬಿನ್ನಾಣ ತಂದುಕೊಟ್ಟರು. ರಜಪುತಾನ ಶೈಲಿಯ ಗೋಪುರ ನಿರ್ಮಿಸಿದರು.

ಈ ಕಳಸಕ್ಕೆ ತಾಮ್ರದ ತಳಹದಿ ಆಧಾರವಾಗಿದ್ದರೂ ಅದರ ಒಂಬತ್ತು ವಿವಿಧ ಭಾಗಗಳಿಗೂ ಚಿನ್ನದ ಲೇಪನವಿದೆ. ದರ್ಬಾರ್ ಹಾಲ್‌ನ ಕೇಂದ್ರೀಕೃತ ಶಿಖರದ ತುತ್ತತುದಿಯಲ್ಲಿರುವ ಕೆಂಪು ದೀಪದ ಕೆಳಗಿರುವ ಸುವರ್ಣ ಕಳಸಕ್ಕೆ ಬಳಸಿದ್ದ ಬಂಗಾರ 9 ತೊಲಗಳು.

ಕೈಗಾರಿಕಾ ಕ್ರಾಂತಿಯ ಅನೇಕ ಅನ್ವೇಷಣೆಗಳು ಬೆಳಕಿಗೆ ಬಂದವು. ಎಲೆಕ್ಟ್ರಿಕ್ ಬಲ್ಬ್ ಬೆಳಗಿತು. ಹಲವು ಹೊಸ ಅನ್ವೇಷಣೆಗಳಿಗೆ ವಿದ್ಯುತ್ ಉತ್ಪಾದನೆ ಅತಿ ಅಗತ್ಯವೆಂದು ಇದಕ್ಕಾಗಿ ಹತ್ತು ಹಲವು ಪ್ರಯೋಗಗಳಾದವು. ಡೈನಾಮೋ, ಬ್ಯಾಟರಿ ಉಪಯೋಗಕ್ಕೆ ಬಂದರೂ ಅವುಗಳ ಬಾಳಿಕೆ ಕಡಿಮೆ, ದುಬಾರಿ. ಬೇರೆ ದಾರಿಗಳಿಂದ ವಿದ್ಯುತ್ ಉತ್ಪಾದನೆ ಪ್ರಯತ್ನಗಳು ಮೊದಲಾದವು.

ಧುಮ್ಮಿಕ್ಕುವ ಜಲಪಾತಗಳು, ಹರಿಯುವ ನದಿ ನೀರು ಉಪಯೋಗಿಸಿ ವಿದ್ಯುತ್ ಉತ್ಪಾದಿಸುವ ಸಂಶೋಧನೆಗಳು ಆರಂಭಗೊಂಡವು. ಇಂತಹ ವಿದ್ಯುತ್ ಉತ್ಪಾದನೆ ಪ್ರಸರಣಕ್ಕೂ ಅವಕಾಶಗಳಿರುವುದು ಬೆಳಕಿಗೆ ಬಂತು. ಭಾರತದಲ್ಲಿ ತಮ್ಮ ಆಳ್ವಿಕೆಗೆ ಎಲ್ಲಾ ಆಧುನಿಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕೆಂಬ ಬ್ರಿಟಿಷ್ ಆಡಳಿತಕ್ಕೆ ವಿದ್ಯುತ್ ಉತ್ಪಾದನೆಯೂ ಆದ್ಯತೆಯ ವಿಷಯವಾಗಿದ್ದು ಸಹಜ. ಉಷ್ಣ ವಿದ್ಯುತ್ ಸ್ಥಾವರ, ಡೀಸೆಲ್ ಎಂಜಿನ್, ಉಗಿಶಕ್ತಿ ಜನರೇಟರ್‌ಗಳಿಂದ ವಿದ್ಯುತ್ ಉತ್ಪಾದಿಸುವ ಘಟಕಗಳು ಆರಂಭಗೊಂಡರೂ ಜಲವಿದ್ಯುತ್ ಯೋಜನೆ ಕಾರ್ಯಗತಗೊಳಿಸುವತ್ತ ಅವರ ದೃಷ್ಟಿ ನೆಟ್ಟಿತ್ತು.

ಚಿನ್ನದ ನಿಕ್ಷೇಪಗಳಿದ್ದ ಕೋಲಾರ ಚಿನ್ನದ ಗಣಿ ಪ್ರದೇಶಗಳು ಮದ್ರಾಸ್ ಬ್ರಿಟಿಷ್ ಆಡಳಿತದ ಮೈಸೂರು ಸಂಸ್ಥಾನದ ಸುಪರ್ದಿನಲ್ಲಿದ್ದವು. ಅಷ್ಟರಲ್ಲಾಗಲೇ ಬ್ರಿಟನ್ ಗಣಿ ಕಂಪನಿಗಳು ಕೋಲಾರದ ಗಣಿಗಳಿಂದ ಚಿನ್ನ ತೆಗೆಯಲು ಇಳಿದಿದ್ದವು. ಇದಕ್ಕಾಗಿ ಉಗಿಶಕ್ತಿ, ಎತ್ತು, ಎಮ್ಮೆ ಕೊನೆಗೆ ಮನುಷ್ಯರ ಶ್ರಮ ಶಕ್ತಿಯನ್ನು ಬಳಸುತ್ತಿದ್ದವು. ಆ ಹೊತ್ತಿಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವಿದ್ಯುತ್ ಉತ್ಪಾದನೆಗೆ ಜಲವಿದ್ಯುತ್ ಸಲೀಸಾದ ಮಾರ್ಗವೆಂಬುದು ಗೊತ್ತಾಗಿತ್ತು.

ಕೋಲಾರ ಗಣಿಗಳಿಂದ ಹೊನ್ನು ಹೊರತೆಗೆಯಲು ಜಲವಿದ್ಯುತ್ ಬಳಕೆಗಾಗಿ ಕೆಲವರ ಕಣ್ಣು ಕಾವೇರಿಕೊಳ್ಳ ಸೃಷ್ಟಿಸಿದ್ದ ಜಲಪಾತಗಳ ಮೇಲೆ ಬಿತ್ತು. ಬ್ರಿಟಿಷ್ ಆಡಳಿತವೇ ಇದ್ದಿದ್ದರಿಂದ ಈ ನಿಟ್ಟಿನಲ್ಲಿ ಚಟುವಟಿಕೆಗಳು ಕ್ಷಿಪ್ರವಾಗಿ ನಡೆದು ಕಾವೇರಿ ನದಿಯಿಂದ ವಿದ್ಯುತ್ ಉತ್ಪಾದನೆ ಮಾಡಿ ಕೆ.ಜಿ.



ಎಫ್. ಚಿನ್ನದ ಗಣಿಗಳಿಗೆ ಒದಗಿಸಬಹುದೆಂಬ ಪ್ರಸ್ತಾವನೆ 1894ರಲ್ಲಿ ಸಿದ್ಧವಾಯಿತು.

ಮೈಸೂರು ಅರಸರೂ ಇದೇ ಯೋಚನೆಯಲ್ಲಿದ್ದರು. ಬ್ರಿಟಿಷ್ ಸರ್ಕಾರ ಹಸಿರು ನಿಶಾನೆ ತೋರಿತು. ಅಮೆರಿಕದ ಜನರಲ್ ಎಲೆಕ್ಟ್ರಿಕ್ ಕಂಪನಿ ಉಸ್ತುವಾರಿಯಲ್ಲಿ ಭಾರತದ ಪ್ರಪ್ರಥಮ ಜಲವಿದ್ಯುತ್ ಯೋಜನೆ ಕಾವೇರಿ ಕೊಳ್ಳದ ಶಿವನಸಮುದ್ರದಲ್ಲಿ 1905ರಲ್ಲಿ ಕಾರ್ಯಾರಂಭಿಸಿತು. ಇದು ಕಾವೇರಿ ಯೋಜನೆಯ ಮೊದಲ ಹಂತದ ಫಲಶೃತಿ. ಇಲ್ಲಿ ಉತ್ಪಾದನೆಯಾದ ವಿದ್ಯುತ್ ಶಕ್ತಿ ಚಿನ್ನದ ಗಣಿಗಳಿಗೆ ಸರಬರಾಜಾಗುತ್ತಿತ್ತು. ವಿದ್ಯುತ್‌ಗೆ ಇನ್ನೂ ಬೇಡಿಕೆ ಬಂತು. ಗಣಿ ಆಡಳಿತಕ್ಕೆ ಉಳಿತಾಯವಾಗುತ್ತಿದ್ದರೆ ಮೈಸೂರು ಸಂಸ್ಥಾನಕ್ಕೆ ಲಾಭದಾಯಕವೂ ಆಯಿತು. ಮೈಸೂರು ಮಹಾರಾಜರು ಕಾವೇರಿ ಜಲ ವಿದ್ಯುತ್ ಯೋಜನೆಯ ಎರಡನೇ ಹಂತಕ್ಕೆ ಒಪ್ಪಿಗೆ ಕೊಟ್ಟರು. ಹೀಗಾಗಿ ಚಿನ್ನದ ಗಣಿಗಳ ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆ 2ನೇ ಹಂತದಲ್ಲಿ ಸಾಧ್ಯವಾಯಿತು. ಬೆಂಗಳೂರು ಬೆಳೆಯತೊಡಗಿತು. ಅಲ್ಲಿಗೆ ವಿದ್ಯುತ್ ಸರಬರಾಜು ಮಾಡಬೇಕೆಂಬ ಕೂಗೆದ್ದಿತ್ತು. 2ನೇ ಹಂತದಲ್ಲಿ ಉತ್ಪಾದಿಸುವ ಹೆಚ್ಚುವರಿ ವಿದ್ಯುತ್ ಶಕ್ತಿಯನ್ನು ಬೆಂಗಳೂರು ಬಳಕೆಗೆ ನೀಡುವ ತೀರ್ಮಾನವಾಯಿತು.

ದೇಶದ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪಿಸಿದ ಮೈಸೂರು ಸಂಸ್ಥಾನಕ್ಕೆ ವಿದ್ಯುತ್ ಸಿಕ್ಕಿದ್ದು 1908ರಲ್ಲಿ. ಮೈಸೂರು ಹೊಸ ಅರಮನೆ ನಿರ್ಮಾಣ 1912ರಲ್ಲಿ ಪೂರ್ಣಗೊಂಡಿತು. ಇದರ ನಿರ್ಮಾಣ ಕಾರ್ಯದಲ್ಲಿ ಸ್ಥಳೀಯ ವಸ್ತುಗಳನ್ನೇ ಹೆಚ್ಚಾಗಿ ಉಪಯೋಗಿಸಿತ್ತು. ದೇಶದ ವಿವಿಧ ಭಾಗಗಳಿಂದ ಹಾಗೂ ವಿದೇಶಗಳಿಂದ ಗಾಜು, ಮರ, ಅಮೃತಶಿಲೆ ವಸ್ತು ವಿಶೇಷಗಳನ್ನು ಬಳಸಲಾಗಿದೆ. ಅಗ್ನಿ ಆಕಸ್ಮಿಕಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಗ್ನಿ ನಿರೋಧಕ ವಿಧಾನವನ್ನು ಇಲ್ಲಿ ಅಳವಡಿಸಲಾಗಿದೆ.

ಹೊಸ ಅರಮನೆಯನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅರಮನೆಯ ಹಿಂಭಾಗದ ಉತ್ತರ ಭಾಗದಲ್ಲಿ ರಾಜವಂಶಸ್ಥರ ಕುಟುಂಬದವರು